ಸಂಖ್ಯೆ : ಎಎಲ್‌ಎನ್ ಎಸ್‌ಆರ್ (ಎಸ್) 72/2006-07

CONVERSION

ಜಿಲ್ಲಾಧಿಕಾರಿಗಳವರ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು ದಿನಾಂಕ : 18.7.2008.

## ಅ ಧಿ ಕೃ ತ ಜ್ಞಾ ಪ ನ

ವಿಷಯ : ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ನಂ : 11/1 ರಲ್ಲಿನ 4-31 ಎಕರೆ / ಗುಂಟೆ, ವಿಸ್ತೀರ್ಣದ ಕೃಷಿ ಜಮೀನನ್ನು ಕೃಷಿಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ ಎ. ವೆಂಕಟರಮಣ ರೆಡ್ಡಿ, ನಂ : 270, ಕೆ.ಎಸ್.ಆರ್.ಟಿ.ಸಿ. ಲೇಔಟ್, 6ನೇ ಬಿ ಮೇನ್, 5ನೇ ಕ್ರಾಸ್, ಜೆ.ಪಿ.ನಗರ, 2ನೇ ಫೇಸ್, ಬೆಂಗಳೂರು 78 ರವರು ಸಲ್ಲಿಸಿರುವ ಅರ್ಜಿ ದಿನಾಂಕ : 17.8.2006.

ಉಲ್ಲೇಖ :
1. ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರ ಪತ್ರದ ಸಂಖ್ಯೆ : ಎಎಲ್‌ಎನ್ ಎಸ್‌ಆರ್ 248/2006-07, ದಿನಾಂಕ : 25.8.2006.
2. ಅರ್ಜಿದಾರರು ಭೂ ಪರಿವರ್ತನಾ ಮತ್ತು ಪೋಡಿ ಶುಲ್ಕ ರೂ. 2,60,054-00 ಗಳನ್ನು ಚಲನ್‌ನ ಸಂಖ್ಯೆ : 59 & 60 ರಲ್ಲಿ ದಿನಾಂಕ : 25.9.2006 ರಂತೆ ರಂತೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಟ್ರೆಜರಿ ಶಾಖೆ, ಎಲ್.ಸಿ. ರಸ್ತೆ, ಬೆಂಗಳೂರಿನಲ್ಲಿ ಜಮಾ ಮಾಡಿರುತ್ತಾರೆ.
3. ಏಕಗವಾಕ್ಷಿ ಸಮಿತಿಯ ನಡುವಳಿಕೆಗಳ ದಿನಾಂಕ : 8.9.2006.
4. ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಸ್ಥಳೀಯ ಯೋಜನಾ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ : ಬಿಎಂಐಸಿಎಪಿಎ 3 ಭೂಪ ಏಕನಿವೇಶನ 32/2008-09, ದಿನಾಂಕ : 7.6.2008.

% % % % %

ಶ್ರೀ ಎ. ವೆಂಕಟರಮಣ ರೆಡ್ಡಿ, ನಂ : 270, ಕೆ.ಎಸ್.ಆರ್.ಟಿ.ಸಿ. ಲೇಔಟ್, 6ನೇ ಬಿ ಮೇನ್, 5ನೇ ಕ್ರಾಸ್, ಜೆ.ಪಿ.ನಗರ, 2ನೇ ಫೇಸ್, ಬೆಂಗಳೂರು 78 ರವರು ಚಿಕ್ಕತೋಗೂರು ಗ್ರಾಮದ ಸರ್ವೆ ನಂ : 11/1 ರಲ್ಲಿನ 4-31 ಎಕರೆ / ಗುಂಟೆ, ವಿಸ್ತೀರ್ಣದ ಕೃಷಿ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ದಿನಾಂಕ : 17.8.2006 ರಂದು ಅರ್ಜಿ ಸಲ್ಲಿಸಿರುವರು. ಸದರಿ ಅರ್ಜಿದಾರರು ಭೂ ಪರಿವರ್ತನಾ ಮತ್ತು ಪೋಡಿ ಶುಲ್ಕ ರೂ. 2,60,054-00 ರೂ. ಗಳನ್ನು ಉಲ್ಲೇಖ [2]ರಲ್ಲಿ ನಮೂದಿಸಿರುವಂತೆ ಸರ್ಕಾರಕ್ಕೆ ದಿನಾಂಕ : 25.9.2006 ರಂದು ಸಂದಾಯ ಮಾಡಿರುತ್ತಾರೆ.

ಸದರಿಯವರ ಕೋರಿಕೆಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 95ರ ಮತ್ತು ಅದರಡಿ ಉಪಬಂಧಗಳನ್ನು ಓದಲಾದ ಕರ್ನಾಟಕ ಮುನ್ಸಿಪಾಲಿಟಿ ಕಾಯ್ದೆ / ಕಾರ್ಪೋರೇಷನ್ ಕಾಯ್ದೆ / ಪಂಚಾಯಿತಿ ಕಾಯ್ದೆಯಲ್ಲಿನ ಹಾಗೂ ಕರ್ನಾಟಕ ಕಂಟ್ರಿ ಟೌನ್ ಪ್ಲಾನಿಂಗ್ ಕಾಯ್ದೆಯಲ್ಲಿನ ಅವಕಾಶಗಳನ್ನು ಅನುಸರಿಸಿ ಪರಿಶೀಲಿಸಲಾಗಿದೆ. ಅರ್ಜಿದಾರರು ಹಾಜರುಪಡಿಸಿದ ಅಗತ್ಯ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿ ಸಂಬಂಧಿತ ಕಾಯ್ದೆ ನಿಯಮಗಳಲ್ಲಿನ ಎಲ್ಲ ಸಂಬಂಧಿತ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಏಕಗವಾಕ್ಷಿ ಸಮಿತಿಯವರು ಮೇಲ್ಕಂಡ ಕಾಯ್ದೆ ಮತ್ತು ನಿಯಮಗಳಲ್ಲಿನ ಷರತ್ತುಗಳನ್ನು ಪಾಲಿಸಿರುವ ಬಗ್ಗೆ ಮನದಟ್ಟು ಮಾಡಿಕೊಂಡಿರುವರು.

ಅರ್ಜಿದಾರರು ಪ್ರಾಧಿಕಾರದ ಅಧಿಕಾರಿಯವರಿಂದ ವಸತಿ ಕಟ್ಟಡ ನಿರ್ಮಿಸಲು ಸ್ಥಳ ನಕ್ಷೆಯನ್ನು ಅನುಮೋದಿಸಿರುವರು. ಏಕಗವಾಕ್ಷಿ ಸಮಿತಿಯು ಅರ್ಜಿದಾರರು ಅಗತ್ಯ ಕ್ರಮ ಕೈಗೊಂಡಿರುವ ಬಗ್ಗೆ ತೃಪ್ತಿಹೊಂದಿದ್ದು, ಶ್ರೀ ಎ. ವೆಂಕಟರಮಣ ರೆಡ್ಡಿ, ನಂ : 270, ಕೆ.ಎಸ್.ಆರ್.ಟಿ.ಸಿ. ಲೇಔಟ್, 6ನೇ ಬಿ ಮೇನ್, 5ನೇ ಕ್ರಾಸ್, ಜೆ.ಪಿ.ನಗರ, 2ನೇ ಫೇಸ್, ಬೆಂಗಳೂರು 78 ಇವರಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ನಂ : 11/1 ರಲ್ಲಿನ 4-31 ಎಕರೆ / ಗುಂಟೆ, ವಿಸ್ತೀರ್ಣದ ವ್ಯವಸಾಯದ ಜಮೀನಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆ ನೀಡಲಾಗಿದೆ.

1. ಭೂ ಪರಿವರ್ತಿತ ಜಮೀನನ್ನು ವಾಸದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.
2. ಈ ಜಮೀನಿನಲ್ಲಿ ಅನುಮೋದನೆಗೊಂಡ ಏಕ ನಿವೇಶನವೆಂದು ಪರಿಗಣಿಸಿ, ಸೆಟ್ ಬ್ಯಾಕ್‌ಗಳನ್ನು ಗುರ್ತಿಸಿ, ಈ ನಿವೇಶನದಲ್ಲಿ (G+3) ಅಂತಸ್ತಿನ ಕಟ್ಟಡ ನಿರ್ಮಿಸಲು/ಬಡಾವಣೆಯ ಸ್ಥಳ ನಕ್ಷೆಗೆ ಅನುಗುಣವಾಗಿ ಕಟ್ಟಡಗಳನ್ನು ಕಟ್ಟುವುದು ಮತ್ತು ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆದಿರುವಂತೆ ನಿಗಧಿಪಡಿಸಿದ ಗಾತ್ರದ ನಿವೇಶನಗಳನ್ನು ಮಾತ್ರ ಪರಭಾರೆ ಮಾಡತಕ್ಕದ್ದು.
3. ಇತರ ಅವಶ್ಯವಾದ ರಸ್ತೆ ಜಾಗ, ಮಾರ್ಜಿನ್, ಖಾಲಿ ಜಾಗ, ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬೆಂಗಳೂರು ಮಹಾಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರಿಂದ ಅನುಮೋದಿಸಲ್ಪಟ್ಟ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.
4. ಸಾರ್ವಜನಿಕ ಹಿತದ ದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುತ್ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಸಾರ್ವಜನಿಕ ಅನುಕೂಲತೆ ಹಾಗೂ ಭದ್ರತೆಗಳ ಉದ್ದೇಶದಿಂದ ಈ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸಿದ ನಂತರವೇ ವಸತಿ ಕಟ್ಟಡದ ಘಟಕಗಳು / ನಿವೇಶನಗಳ ಹಂಚಿಕೆ / ಪರಭಾರೆ ಮಾಡತಕ್ಕದ್ದು.
5. ಈ ಜಮೀನಿಗೆ ತಾಕು ಪೋಟ್ ಖರಾಬ್ ಜಮೀನು ಇದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 67ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ಜಮೀನನ್ನು ಕಾಯ್ದಿರಿಸುವ ಬಗ್ಗೆ ನಕ್ಷೆಯಲ್ಲಿ ಗುರುತಿಸಿ ದೃಢೀಕರಿಸಿದ ಅನುಮೋದಿತ ನಕ್ಷೆಯನ್ನು ಪಡೆದು ತಹಸೀಲ್ದಾರ್‌ರವರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.
6. ಲೋಕೋಪಯೋಗಿ ಇಲಾಖೆಯವರು ಶಾಸನಾತ್ಮಕವಾಗಿ ನಿರ್ಧರಿಸಿರುವಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ ನಿಗಧಿಪಡಿಸಿದ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ ನಿಗಧಿಪಡಿಸಿದ ಅಂತರವನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.
7. ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಘಟಕಗಳು ಹೊರದೂಡುವ ಹೊಗೆ, ಅನಿಲ, ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಈ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ/ಪರಿಸರ ಇಲಾಖೆಗಳ ಅನುಮತಿ ಪಡೆದಿರುವ ರೀತ್ಯ ಅಥವಾ ಷರತ್ತುಗಳನ್ನು ಪೂರೈಸಿದ ನಂತರವೇ ಉಪಯೋಗಿಸಿಕೊಳ್ಳತಕ್ಕದ್ದು.
8. ಸದರಿ ಬಡಾವಣೆಗೆ ಹೋಗಲು ಸಂಪರ್ಕ ರಸ್ತೆಯನ್ನು ಅನುಮೋದಿತ ಬಡಾವಣೆ ನಕ್ಷೆಯಲ್ಲಿರುವ ರೀತಿಯೇ ನಿರ್ಮಿಸತಕ್ಕದ್ದು.
9. ಬಡಾವಣೆಯೊಳಗೆ ಅಂತರಿಕ ರಸ್ತೆಗಳನ್ನು ಅಗಲಕ್ಕೆ ಅನುಗುಣವಾಗಿ ಏಕಗವಾಕ್ಷಿ ಸಮಿತಿಯಲ್ಲಿ ಪ್ರಾಧಿಕೃತ ಇಲಾಖೆಯವರು ಅನುಮೋದನೆ ನೀಡಿರುವಂತೆ ಮಾತ್ರ ನಿರ್ಮಿಸತಕ್ಕದ್ದು.
10. ಸಾರ್ವಜನಿಕ ಉಪಯೋಗಕ್ಕಾಗಿ ನಿಗಧಿಪಡಿಸಲ್ಪಟ್ಟ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ನಂ : 11/1 ರಲ್ಲಿನ 4-31 ಎಕರೆ / ಗುಂಟೆ, ಪ್ರದೇಶದಲ್ಲಿ ತಾತ್ಕಾಲಿಕ ಏಕ ನಿವೇಶನ ವಸತಿ ನಿರ್ಮಾಣ ಮಾಡಲು ಪ್ರಾಧಿಕಾರದಿಂದ ನಕ್ಷೆಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ ಸದರಿ ಪ್ರಾಧಿಕಾರದ ನಕ್ಷೆಯಂತೆ ಬಹು ಉಪಯೋಗಿ ಉದ್ದೇಶಗಳನ್ನು ನೋಂದಾವಣೆ ಮಾಡಿಸಿಕೊಳ್ಳತಕ್ಕದ್ದು.

*Area Statement*

*Total Construction Area*

| Land Use | : | Area in Sq. mt |
|---|---|---|
| Total Site Area | : | 19330.76 |

11. ಬಡಾವಣೆ ರೂಪ ರೇಷೆಗೆ ಮತ್ತು ನಕ್ಷೆಗೆ ಅನುಮೋದನೆ ನೀಡುವ ಪ್ರಾಧಿಕಾರವು ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳು ಪ್ರಾಧಿಕೃತ ನಿಯಮಗಳಿಗೆ ಅನುಗುಣವಾಗಿ ಇರುವ ಬಗ್ಗೆ ಮತ್ತು ಭೌತಿಕವಾಗಿ ಬಡಾವಣೆ ರಚನೆಯಾಗಿರುವ ಬಗ್ಗೆ ಖಚಿತಪಡಿಸಿಕೊಂಡು ನಿಯಮಗಳಂತೆ ಮಾರಾಟಕ್ಕೆ ಫ್ಲಾಟ್‌ಗಳನ್ನು ಸದರಿ ಪ್ರಾಧಿಕಾರವು ಬಿಡುಗಡೆ ಪತ್ರ / ಅನುಮತಿ ಪತ್ರ ನೀಡತಕ್ಕದ್ದು. ಅನುಮತಿ ಪತ್ರವಿಲ್ಲದೆ ನಿವೇಶನ ಪರಭಾರೆ ನಿಷೇಧಿಸಿದೆ.
12. ಈ ಸರ್ವೆ ನಂಬರ್‌ನಲ್ಲಿನ ಒಟ್ಟು ವಿಸ್ತೀರ್ಣ ಪೋಡಿ ಮಾಡಿದ ನಂತರವೇ ಜಮೀನಿನ ಪರಭಾರೆಗೆ ಅವಕಾಶವಿದೆ ತಪ್ಪಿದಲ್ಲಿ ಪರಭಾರೆ ನಿಷೇಧಿಸಿದೆ.
13. ಭೂ ಪರಿವರ್ತನಾ ಪತ್ರ, ಬಡಾವಣೆ ಅನುಮೋದನೆ ಪತ್ರ, ಅನುಮೋದಿತ ಕಟ್ಟಡ ನಕ್ಷೆ ಹಾಗೂ ಬಡಾವಣೆಯಲ್ಲಿ ಮೂಲಭೂತ ಸೌಕರ್ಯ ಶಾಸನಾತ್ಮಕವಾಗಿ ರಚನೆಯಾದ ಬಗ್ಗೆ ನೀಡಿದ ಪತ್ರಗಳನ್ನು ಹಾಜರುಪಡಿಸಿ ನಿವೇಶನಗಳನ್ನು ನೋಂದಾವಣೆ ಮಾಡಿಸಿಕೊಳ್ಳತಕ್ಕದ್ದು.

ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೇ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ತಾತ್ಕಾಲಿಕ ನಕ್ಷೆ ಅನುಮೋದಿಸಿದ್ದು ಅನುಮೋದಿತ ನಕ್ಷೆಯಲ್ಲಿನ ವ್ಯತ್ಯಾಸಗಳಿಗೆ ವಂಚರ ಜವಾಬ್ದಾರರಾಗಿರತಕ್ಕದ್ದು.

## ಷೆಡ್ಯೂಲ್ ವಿವರ

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ನಂ : 11/1 ರಲ್ಲಿನ 4–31 ಎಕರೆ / ಗುಂಟೆ, ವಿಸ್ತೀರ್ಣದ ಭೂ ಪರಿವರ್ತಿತ ಜಮೀನಿನ ಚಕ್ಕುಬಂದಿ:

ಗ್ರಾಮ : ಚಿಕ್ಕತೋಗೂರು

| | | |
|---|---|---|
| ಪೂರ್ವಕ್ಕೆ | : | ಸರ್ವೆ ನಂ : 11/1ರ ಉಳಿಕೆ ಜಮೀನು ಮತ್ತು ಸರ್ವೆ ನಂ : 62 |
| ಪಶ್ಚಿಮಕ್ಕೆ | : | 40 ಅಡಿ ರಸ್ತೆ ಮತ್ತು ಸರ್ವೆ ನಂ : 65, 66 ಮತ್ತು 20 |
| ಉತ್ತರಕ್ಕೆ | : | ಸರ್ವೆ ನಂ : 11/1ರ ಉಳಿಕೆ ಜಮೀನು ಮತ್ತು ಸರ್ವೆ ನಂ : 11/3 |
| ದಕ್ಷಿಣಕ್ಕೆ | : | ಸರ್ವೆ ನಂ : 11/1ರ ಉಳಿಕೆ ಜಮೀನು ಮತ್ತು ಸರ್ವೆ ನಂ : 11/2 |

ಸಹಿ/–
[ಹೆಚ್. ರಾಮಾಂಜನೇಯ],
ವಿಶೇಷ ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಲಾಗಿದೆ :

1. ತಹಶೀಲ್ದಾರರು, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರುರವರಿಗೆ ಮೂಲ ಕಡತ ಹಾಗೂ ಚಲನ್‌ದೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್.ಟಿ.ಸಿ.ಯಲ್ಲಿ ನಮೂದಿಸತಕ್ಕದ್ದು. ಮತ್ತು ಈ ಜಮೀನಿಗೆ ಖಾತೇದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
2. ಯೋಜನಾ ಸದಸ್ಯರು / ಉಪನಿರ್ದೇಶಕರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ.
3. ಶ್ರೀ ಎ. ವೆಂಕಟರಮಣ ರೆಡ್ಡಿ, ನಂ : 270, ಕೆ.ಎಸ್.ಆರ್.ಟಿ.ಸಿ. ಲೇಔಟ್, 6ನೇ ಬಿ ಮೇನ್, 5ನೇ ಕ್ರಾಸ್, ಜೆ.ಪಿ.ನಗರ, 2ನೇ ಫೇಸ್, ಬೆಂಗಳೂರು 78 ರವರಿಗೆ ದೃಢೀಕೃತ ಅಂಚೆ ಮೂಲಕ ಕಳುಹಿಸಲಾಗಿದೆ.
4. ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ, ಮೋಡಿಯಂ ಬ್ಲಾಕ್, ಬೆಂಗಳೂರುರವರಿಗೆ.
5. ಹೆಚ್ಚಿನ ಪ್ರತಿ.

ವಿಶೇಷ ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ,ಬೆಂಗಳೂರು.